ವೈಫಲ್ಯಗಳು ಜರುಗಿದ್ದವು. ಅಥವಾ, ಬದುಕೇ ಬದುಕಾಗಿ ವಿಫಲಿಸಿತ್ತೆಂಬುದು ಹೆಚ್ಚು ಸರಿ!

ಹೌದು... ಒಂದು ಸಾಲದೆಂದು ಎರಡು ವೈಫಲ್ಯಗಳು. ಮೊದಲನೆಯದು ಪ್ರೇಮಭಂಗ; ಇನ್ನೊಂದು ವಿವಾಹಭಂಗ. ಮದುವೆಯಾದೆನಾದರೆ ಮೊದಲ ಪ್ರೀತಿ ಮರೆಯುತ್ತದೆಂದು, ನನ್ನ ಅಮ್ಮ, ಸವ್ವಾ ಎಂದೊಬ್ಬ ಕಾಶ್ಮೀರೀಕನ್ಯೆಯನ್ನು ತಂದುಕಟ್ಟಿದ್ದಳು. ಒಂದು ಸೋಲನ್ನು ಸೆಣಸುವುದಕ್ಕೆ ಇನ್ನೊಂದು ಸೋಲನ್ನು ವರಿಸಹೇಳಿದ್ದಳು! ನಾನೆಣಿಸಿದ ಹಾಗೆಯೇ ಈ ಮದುವೆ ಹೆಚ್ಚು ಕಾಲ ಉಳಿಯಲಿಲ್ಲ. ಸವ್ವಾ ನನ್ನ ಸಲುವಾಗಿ ಕಾಯುವಷ್ಟು ಕಾದು, ಎರಡನೇ ದೀಪಾವಳಿಯ ಸುಮಾರಿಗೆ ತವರು ಹೊಕ್ಕವಳು ಮುಂದೆಂದೂ ಶ್ರೀನಗರದಿಂದ ವಾಪಸಾಗಲಿಲ್ಲ! ನಾನೂ ಈ ಕುರಿತು ಪರಿತಪಿಸಲಿಲ್ಲ!

ಮೊದಲ ಪ್ರೀತಿಯು ಮುರಿದ ಹತಾಶೆಯಲ್ಲಿಯೇ ಬದುಕು ನೂಕಿಕೊಂಡಿದ್ದೆ. ಒಲಿದ ಹೆಣ್ಣು ವಿನಾಕಾರಣ ದೂರವಾದಳೆಂಬ ಸಂಗತಿಯು ನನ್ನೊಳಗೆ ಅರಗಲೇ ಇಲ್ಲ. ಇವೊತ್ತಿಗೂ ಅರಗಿಲ್ಲ... ಈವೊತ್ತಿಗೂ ನಾನು ಅವಳ ಬಗ್ಗೆ ಹಪಹಪಿಸುವುದಿದೆ. ನಾನು ತೀರದ ಹೊರತು ಮೋಹ ತೀರದೆನ್ನುವ ಭ್ರಾಂತಿನಲ್ಲಿಯೇ ಈ ತನಕ ಬದುಕಿದ್ದೇನೆ. ಹೇಳುವುದಾದರೆ, ನಾನು ಈ ಜಗತ್ತಿನಲ್ಲಿ ಭಾವನಾತ್ಮಕವಾಗಿ ಅಂಟಿಕೊಂಡಿರುವ ಸಂಗತಿಯೆಂದರೆ ಇದೊಂದೇ! ಇಲ್ಲದಿದ್ದಲ್ಲಿ ಅವರಿವರ ಸಾವೆಂಬ ಸಾವು ಕುರಿತು ಅನುದಿನವೂ ಏಗಲಾದೀತೇನು?

ಈ ನಡುವೆ ನನ್ನ ಅಮ್ಮನೂ ಕಾಲವಾದಳು. ಅಪ್ಪ ಒಮ್ಮೆ ತನ್ನ ದುಡ್ಡುಕಾಸಿನ ದೊಡ್ಡಸ್ತಿಕೆಯನ್ನೇ ಮುಂದಿಟ್ಟುಕೊಂಡು ಮಾತನಾಡಿದಾಗ, 'ಡ್ಯಾಡ್... ಐ ವಿಲ್ ಡು ಥಿಂಗ್ಸ್ ಆನ್ ಮೈ ಓನ್... ನಾನು ನನ್ನದೇ ಕರಾರುಗಳ ಮೇಲೆ ಬದುಕಬಲ್ಲೆ – ನಿಮ್ಮ ಹಣಕಾಸಿನ ಹಂಗಿಲ್ಲದೆ' ಎಂದು ಮುಖರಾಚುವಂತಹ ಮಾತು ಹೇಳಿ ಹೊರಬಂದೆ. ಅಂಧೇರಿಯಲ್ಲಿ ಫ್ಲ್ಯಾಟ್ ಕೊಂಡುಕೊಂಡೆ. ಆ ದಿನಗಳಲ್ಲಿ ಪ್ರಕಾಂಡ ಶರ್ಮಾ ಎಂದೊಬ್ಬನ ಪರಿಚಯವಾಯಿತು. ಬನಾರಸ್ ಮೂಲದವ. ಮೊದಲು ರೂಮ್‌ಮೇಟ್ ಆದವನು, ಕ್ರಮೇಣ ಭಾರೀ ಹತ್ತಿರದ ಸ್ನೇಹಿತನಾದ. ಅವನೊಡನೆ ಒಂದೆರಡು ಸಲ ಕಾಶಿಗೆ ಹೋಗಿಬಂದೆ. ಗಂಗೆಯ ತಟದಲ್ಲಿ ಜರುಗುವ ಸಂಸ್ಕಾರಗಳನ್ನು ನೋಡುವಾಗ ಈ ದೇಶದ ಮನುಷ್ಯ ತನ್ನ ಸಾವಿನಾಚೆಯದನ್ನೂ ಇಷ್ಟು ಜತನವಾಗಿ ಯೋಜಿಸುತ್ತಾನಲ್ಲ... ಇದನ್ನೇ ಒಂದು ಉದ್ದಿಮೆಯಾಗಿ ಬೆಳೆಸಿದರೆ... ಎಂದೊಂದು ಹೊಳೆದುಬಂತು.

ಅನಿಸಿದ್ದನ್ನು ಆಗಿಸಿದೆ! ಅದು ಕ್ರಮೇಣ ಅನಿಸಿದ್ದಕ್ಕೂ ಹೆಚ್ಚೇ ಆಗಿಬಿಟ್ಟಿತು!!

ಈಗ 'ಸಂಸ್ಕಾರ್ ರೈಟ್ಸ್'ಗೆ ಹದಿಮೂರನೇ ವಯಸ್ಸು. ನನಗೆ ನಲವತ್ತೆಂಟು... ಸದ್ಯಕ್ಕೆ ವರ್ಷಕ್ಕೆಂಬತ್ತು ಕೋಟಿ ದುಡ್ಡಿನ, ನಾನೇ ಎಣಿಸಿದ್ದಿರದ ವಹಿವಾಟಿದೆ. ಇಪ್ಪತ್ತು ಕೋಟಿ ಕಾರ್ಪಸ್ ಫಂಡ್ ಇದೆ. ಸಾವಿನ ನಂತರದ ಸಂಸ್ಕಾರದಿಂದ ಸುರುಗೊಂಡು ಹದಿನಾಲ್ಕನೇ ದಿವಸದವರೆಗಿನ ಸಕಲಾತಿ ಸಕಲವನ್ನೂ ನನ್ನ ಕಂಪೆನಿ ವಹಿಸಿಕೊಳ್ಳುತ್ತದೆ. ನಿರ್ವಹಿಸುತ್ತದೆ.

## 4

ಹ್ಞಾಂ... ಇನ್ನೊಂದು ಹೇಳಲು ಮರೆತೆ. ದೊಡ್ಡ ಕಂಪೆನಿಯ ಮಾಲೀಕನಾದ್ದರಿಂದ ವ್ಯಾವಹಾರಿಕ ಜಗತ್ತು ನನ್ನನ್ನು 'ಡೈರೆಕ್ಟರ್' ಎಂದು ಗುರುತಿಸುತ್ತದೆ. ದುಡ್ಡುಕಾಸಿನ ಸರಕಾರೀ ದಾಖಲೆಗಳಲ್ಲಿ ಈ 'ಡೈರೆಕ್ಟರಿಕೆ' ಅಗತ್ಯವೆಂಬುದಕ್ಕಿಂತ ಅನಿವಾರ್ಯ ಕೂಡ.... ಇದು 'ಸಂಸ್ಕಾರ್ ರೈಟ್ಸ್' ಕುರಿತಾಡುವುದಾದರೆ, ಇದೊಂದು ಪ್ರೈವೇಟ್ ಲಿಮಿಟೆಡ್ ಕಂಪೆನಿ. ನೂರೆಂಟು ಮಂದಿ ಊಳಿಗವನ್ನು ಸಂಬಳಿಸುವ ಧಣಿ ನಾನು! ಹಾಗಾದರೆ ನನ್ನ ಈ ಕೆಲಸವನ್ನು ಏನಂತ ಗುರುತಿಸಿಕೊಳ್ಳುವುದು? ಪಾಶ್ಚಿಮಾತ್ಯ ಜಗತ್ತು ನನ್ನಂಥವರನ್ನು 'ಫ್ಯೂನರಲ್ ಡೈರೆಕ್ಟರ್' ಅಂತನ್ನುತ್ತದೆ. ಅದೇ ನನ್ನ ಕೆಲಸವನ್ನು 'ಫ್ಯೂನರಲ್ ಡೈರೆಕ್ಷನ್' ಎಂದು ಕರೆಯುತ್ತದೆ. ಇತ್ತಿತ್ತಲಾಗಿ, ಈ ಬಗೆಯ 'ನಿರ್ದೇಶನ'ವುಳ್ಳ ನಿದರ್ಶನಗಳು ಈ